# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1608
ಉತ್ತರಿಸಬೇಕಾದ ದಿನಾಂಕ : 11.03.2022
ಸದಸ್ಯರ ಹೆಸರು : ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ಯುವ ಸಬಲೀಕರಣ ಮತ್ತು ಕ್ರೀಡೆಯ ಬಗೆಗಿನ ಸರ್ಕಾರದ ನೀತಿ ಏನು; | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು, ಯುವ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತೆ ಯುವ ಜನರನ್ನು ಪ್ರೇರೇಪಿಸಲು ಮತ್ತು ರಾಜ್ಯದ ಯುವಜನರನ್ನು ತಲುಪಲು ಎಲ್ಲ ಸ್ತರಗಳಲ್ಲಿ ಅವಕಾಶ ಕಲ್ಪಿಸುವುದು; ಯುವಜನರ ಗುರಿ, ಆಶೋತ್ತರ ಹಾಗೂ ಅಗತ್ಯತೆಗಳನ್ನು ಅರ್ಥ ಮಾಡಿಕೊಳ್ಳುವುದು, ವೈವಿಧ್ಯಮಯ ಸಾಂಸ್ಕೃತಿಕ ಸಂರಚನ ಸಾಮಾಜಿಕ - ಆರ್ಥಿಕ ಪರಿಸ್ಥಿತಿಗನುಗುಣವಾಗಿ ರಾಜ್ಯದೆಲ್ಲೆಡೆ ಹರಡಿಕೊಂಡಿರುವ ಯುವಜನರ ವಿವಿಧ ಅಗತ್ಯ ಬೇಡಿಕೆಗಳಿಗೆ ಸ್ಪಂದಿಸುವುದು ಹಾಗೂ ಕರ್ನಾಟಕ ರಾಜ್ಯದ ಯುವಜನರನ್ನು ದೃಷ್ಟಿಯಲ್ಲಿರಿಸಿಕೊಂಡು ಅವರಿಗಾಗಿ ಅಲ್ಪಾವಧಿ ಹಾಗೂ ದೀರ್ಘಾವಧಿ ಯೋಜನೆಗಳನ್ನು ಒಳಗೊಂಡಂತೆ 2012-13ನೇ ಸಾಲಿನಲ್ಲಿ ಕರ್ನಾಟಕ ಯುವ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಯುಸೇಇ/158/ಯುಸೇಕ್ರೀ/2012; ದಿನಾಂಕ: 30.01.2013ರಲ್ಲಿ ಜಾರಿಗೆ ತರಲಾಗಿದೆ.<br><br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ನೀತಿ ಅಡಿಯಲ್ಲಿ ಕರ್ನಾಟಕದ ಜನತೆಯು ಬಲಿಷ್ಠ ಕ್ರೀಡಾ ಸಂಸ್ಕೃತಿಯ ಅನುಭವ ಮತ್ತು ಫಲವನ್ನು ಪಡೆಯುವಂತೆ ಅನುವು ಮಾಡುವುದು ಮತ್ತು ಸಬಲೀಕರಿಸುವುದು; ಕ್ರೀಡೆಯನ್ನು ಕೈಗೆಟುಕುವಂತೆ, ಆಹ್ಲಾದಿಸುವಂತೆ ಹಾಗೂ |

| | | |
|---|---|---|
| | | ಸುಸ್ಥಿರ ರೀತಿಯಲ್ಲಿ ಆಟವಾಡಲು ಬಯಸುವ ಎಲ್ಲರಿಗೂ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಉನ್ನತ ಸಾಧನೆ ಮಾಡುವ ಹಂಬಲವಿರುವ ಎಲ್ಲರಿಗೂ ಅನುವಾಗುವಂತಹ ಕರ್ನಾಟಕದ ಪ್ರತಿಯೊಬ್ಬ ನಿವಾಸಿಗೂ ಅವನ / ಅವಳ ಆಯ್ಕೆಯ ಕ್ರೀಡೆಯಲ್ಲಿ ಭಾಗವಹಿಸಿ ಅನುಭವ ಪಡೆಯಲು ಅವಕಾಶವನ್ನು ಒದಗಿಸಲು ಕ್ರೀಡಾ ನೀತಿಯನ್ನು 2018-19ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಯುಸೇಇ 165 ಯುಸೇಕ್ರೀ 2017; ದಿನಾಂಕ: 14.03.2018ರಲ್ಲಿ ಜಾರಿಗೆ ತರಲಾಗಿದೆ. |
| 2 | ಸರ್ಕಾರದ ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ಕ್ರೀಡೆಗಳ ತಂಡಗಳಿವೆ: (ಇಲಾಖಾವಾರು ವಿವರಗಳನ್ನು ನೀಡುವುದು) | ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ವಿವಿಧ ಇಲಾಖೆಗಳಿಂದ ತಂಡಗಳನ್ನು ಮಾಡಿಕೊಂಡು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುತ್ತಾರೆ. ಪ್ರತ್ಯೇಕವಾಗಿ ಇಲಾಖಾವಾರು ತಂಡಗಳು ಇರುವುದಿಲ್ಲ. |
| 3 | ಈ ಉದ್ದೇಶಕ್ಕಾಗಿ ಸರ್ಕಾರ ಕಳೆದ 5 ವರ್ಷಗಳಿಂದ ಒದಗಿಸಿರುವ ಹಣವೆಷ್ಟು; | ಇಲಾಖೆಯಿಂದ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಕಳೆದ 5 ವರ್ಷಗಳ ಅವಧಿಯಲ್ಲಿ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ:-<br>**(ರೂ. ಲಕ್ಷಗಳಲ್ಲಿ)**<br>**ಆರ್ಥಿಕ ಸಾಲು** — **ಅನುದಾನ**<br>2016-17 — 50.00<br>2017-18 — 50.00<br>2018-19 — 50.00<br>2019-20 — 150.00<br>2020-21 — 250.00 |
| 4 | ಯಾವ ಯಾವ ಬಾಬ್ತುಗಳಿಂದ ಈ ಹಣವನ್ನು ವೆಚ್ಚ ಮಾಡಲಾಗಿದೆ; (ಬಾಬ್ತುವಾರು ಮಾಹಿತಿ ನೀಡುವುದು) | ಈ ಹಣವನ್ನು ಲೆಕ್ಕ ಶೀರ್ಷಿಕೆ: 2204-00-104-0-02 100 ಧನ ಸಹಾಯ/ಪರಿಹಾರ (ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ) ಅಡಿಯಲ್ಲಿ ಒದಗಿಸಲಾದ ಅನುದಾನದಿಂದ ವೆಚ್ಚ ಮಾಡಲಾಗಿದೆ. |

**ವೈಎಸ್‌ಡಿ/ಇಬಿಬಿ/45/2022**

**(ಡಾ|| ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.